ಜಿಲ್ಲಾಧಿಕಾರಿಗಳ ಹಾಗೂ
ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ
ಕೊಡಗು ಜಿಲ್ಲೆ, ಮಡಿಕೇರಿ-571201

ಕಛೇರಿ: 08272-225500
ನಿವಾಸ: 08272-225700
ಫ್ಯಾಕ್ಸ್: 08272-225900
ಈ-ಮೇಲ್:deo.kodagu@gmail.com
ವೆಬ್ ಸೈಟ್: http://www.kodagu.nic.in

---

ಸಂಖ್ಯೆ:ಪ್ರ.ವಿ./ 4 /2018-19 ದಿನಾಂಕ: 06-09-2018

ಗೆ,

ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು,
ಕಂದಾಯ ಇಲಾಖೆ(ವಿಪತ್ತು ನಿರ್ವಹಣೆ),
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಮಾನ್ಯರೇ,

ವಿಷಯ: ಕೊಡಗು ಜಿಲ್ಲೆಯಲ್ಲಿ ಉಂಟಾಗಿದ್ದ ಅತಿವೃಷ್ಠಿ ಸಂದರ್ಭ ತುರ್ತು ಪರಿಹಾರ ಕಾರ್ಯಕ್ಕಾಗಿ ನಿಯೋಜಿತರಾದ ಅಧಿಕಾರಿ / ಸಿಬ್ಬಂದಿಗಳ ವಿವರ ಸಲ್ಲಿಸುವ ವಿಚಾರ.

ಉಲ್ಲೇಖ: ಆರಕ್ಷಕ ಅಧೀಕ್ಷಕರು, ಕೊಡಗು ಜಿಲ್ಲೆ, ಮಡಿಕೇರಿ ಇವರ ಪತ್ರ ಸಂಖ್ಯೆ: ಎಸ್‌ಬಿ/ಸಿಸಿಆರ್/ಪ್ರ.ವಿ./74/2018, ದಿನಾಂಕ 06.09.2018

---

ಕೊಡಗು ಜಿಲ್ಲೆಯಲ್ಲಿ ಕೆಲ ದಿನಗಳ ಹಿಂದೆ ಆದ ಭಾರೀ ಗಾಳಿ ಮಳೆಯಿಂದ ಮಡಿಕೇರಿ ನಗರದ ಸುತ್ತಮುತ್ತ ಹಾಗೂ ಜಿಲ್ಲೆಯ ಹಲವೆಡೆ ಜಲಾವೃತ ಮತ್ತು ಭೂಕುಸಿತದಿಂದ ಮಾನವ / ಜಾನುವಾರು ಜೀವಹಾನಿ, ಮನೆಹಾನಿ, ರಸ್ತೆಹಾನಿ ಸೇರಿದಂತೆ ಹಲವು ನಷ್ಟಗಳು ಆಗಿರುತ್ತದೆ. ಈ ಸಂದರ್ಭದಲ್ಲಿ ತುರ್ತು ಪರಿಹಾರ / ರಕ್ಷಣಾ ಕ್ರಮಕ್ಕಾಗಿ ಸಹಕರಿಸಲು ಅಗ್ನಿಶಾಮಕ, ಗೃಹರಕ್ಷಕ, ಪೌರರಕ್ಷಣೆ, ಎಸ್.ಡಿ.ಆರ್.ಎಫ್., ನೌಕಾದಳ, ಗರುಡ ಮುಂತಾದ ತಂಡಗಳನ್ನು ಕೊಡಗು ಜಿಲ್ಲೆಗೆ ನಿಯೋಜಿಸಲಾಗಿತ್ತು.

ನಿಯೋಜಿತ ಎಲ್ಲಾ ತಂಡಗಳ ಅಧಿಕಾರಿ ಮತ್ತು ಸಿಬ್ಬಂದಿಗಳು ಸಮರೋಪಾದಿ ಮತ್ತು ಪ್ರಶಂಸನೀಯ ರೀತಿಯಲ್ಲಿ ರಕ್ಷಣಾ ಕಾರ್ಯ ಕೈಗೊಂಡಿರುತ್ತಾರೆ. ಸದರಿ ತಂಡಗಳ ಅಧಿಕಾರಿ ಮತ್ತು ಸಿಬ್ಬಂದಿಗಳ ವಿವರವನ್ನು ಉಲ್ಲೇಖದ ಪತ್ರದಂತೆ ಆರಕ್ಷಕ ಅಧೀಕ್ಷಕರು, ಕೊಡಗು ಜಿಲ್ಲೆ, ಮಡಿಕೇರಿ ಇವರು ಈ ಕಚೇರಿಗೆ ಸಲ್ಲಿಸಿರುತ್ತಾರೆ. ಸದರಿ ತಂಡಗಳ ಅಧಿಕಾರಿ ಮತ್ತು ಸಿಬ್ಬಂದಿಗಳ ವಿವರವನ್ನು ಈ ಕೂಡ ಲಗತ್ತಿಸಿ ತಮ್ಮ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ನಂಬುಗೆಯ,

ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ, ಮಡಿಕೇರಿ.